# ಕರ್ನಾಟಕ ಅರಣ್ಯ ಇಲಾಖೆ

## ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಮುಖ್ಯಸ್ಥರು, ಅರಣ್ಯ ಪಡೆ) ಹಾಗೂ ಆಯ್ಕೆ ಪ್ರಾಧಿಕಾರ ಇವರ ಕಚೇರಿ, ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು-560003

## ಅರಣ್ಯ ವೀಕ್ಷಕ ಹುದ್ದೆಗಳ ನೇರ ನೇಮಕಾತಿ

ಸಂಖ್ಯೆ: ಬಿ9-ಅವೀ-ನೇಮಕಾತಿ-ವಿವ-5/2012-13 ದಿನಾಂಕ 18-03-2013 ಮತ್ತು
ದಿನಾಂಕ 07-05-2015

## ಪ್ರಕಟಣೆ

ಕರ್ನಾಟಕ ಅರಣ್ಯ ಇಲಾಖೆಯಲ್ಲಿ ಒಟ್ಟು 248 ಅರಣ್ಯ ವೀಕ್ಷಕ ಹುದ್ದೆಗಳಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು. ಅರ್ಜಿ ಸಲ್ಲಿಸಿರುವ ಅರ್ಹ ಅಭ್ಯರ್ಥಿಗಳಿಗೆ ದಿನಾಂಕ 13-10-2015 ರಿಂದ ಪ್ರಥಮ ಹಂತದ ದೈಹಿಕ ತಾಳ್ವಿಕೆ ಪರೀಕ್ಷೆಗಳನ್ನು ಏರ್ಪಡಿಸಲಾಗಿತ್ತು. ಈ ಪ್ರಥಮ ಹಂತದ ದೈಹಿಕ ತಾಳ್ವಿಕೆ ಪರೀಕ್ಷೆಯಲ್ಲಿ ಅರ್ಹರಾದ ಅಭ್ಯರ್ಥಿಗಳ ಪಟ್ಟಿಯನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ಅರ್ಹ ಅಭ್ಯರ್ಥಿಗಳ ವಿವರ ಈ ಕೆಳಕಂಡಂತಿದೆ:-

| ಕ್ರ. ಸಂ. | ವೃತ್ತದ ಹೆಸರು | ಹುದ್ದೆಗಳ ಸಂಖ್ಯೆ | 2ನೇ ಹಂತದ ದೈಹಿಕ ಕಾರ್ಯಸಮರ್ಥತೆ ಪರೀಕ್ಷೆಗಳಿಗೆ ಅರ್ಹರಾದ ಅಭ್ಯರ್ಥಿಗಳ ಸಂಖ್ಯೆ. |
|---|---|---|---|
| 1 | ಬೆಂಗಳೂರು | 60 | 1313 |
| 2 | ಚಿಕ್ಕಮಗಳೂರು | 25 | 494 |
| 3 | ಹಾಸನ | 52 | 761 |
| 4 | ಕೊಡಗು | 27 | 161 |
| 5 | ಮಂಗಳೂರು | 43 | 474 |
| 6 | ಮೈಸೂರು | 24 | 519 |
| 7 | ಹೈದರಾಬಾದ್-ಕರ್ನಾಟಕ | 17 | 1065 |
| | ಒಟ್ಟು: | 248 | 4787 |

ಪ್ರಥಮ ಹಂತದ ದೈಹಿಕ ತಾಳ್ವಿಕೆ ಪರೀಕ್ಷೆಯಲ್ಲಿ ಅರ್ಹರಾದ ಅಭ್ಯರ್ಥಿಗಳು 2ನೇ ಹಂತದ ದೈಹಿಕ ಕಾರ್ಯ ಸಮರ್ಥತೆ ಪರೀಕ್ಷೆಗೆ ಹಾಜರಾಗಬೇಕು. ವಿವರ ಈ ಕೆಳಕಂಡಂತಿದೆ:-

| ಕ್ರ. ಸಂ. | ಈವೆಂಟ್ಸ್ | ಅರ್ಹತಾ ಸಮಯ ಮತ್ತು ಕ್ರಮಿಸಬೇಕಾದ ದೂರ | |
|---|---|---|---|
| | | ಪುರುಷ ಅಭ್ಯರ್ಥಿಗಳಿಗೆ | ಮಹಿಳಾ ಅಭ್ಯರ್ಥಿಗಳಿಗೆ |
| 1 | 100 ಮೀಟರ್ ಓಟ | 15 ಸೆಕೆಂಡುಗಳು | 18.5 ಸೆಕೆಂಡುಗಳು |
| 2 | ಎತ್ತರ ಜಿಗಿತ | 1.20 ಮೀಟರ್ | 0.90 ಮೀಟರ್ |
| 3 | ಉದ್ದ ಜಿಗಿತ | 3.80 ಮೀಟರ್ | 2.50 ಮೀಟರ್ |
| 4 | ಶಾಟ್‌ಪುಟ್ (ಪುರುಷರಿಗೆ 16 LB); (ಮಹಿಳೆಯರಿಗೆ: 8 LB) | 5.60 ಮೀಟರ್ | 3.76 ಮೀಟರ್ |
| 5(ಎ) | 800 ಮೀಟರ್ ಓಟ | 2 ನಿಮಿಷ 50 | --- |
| 5(ಬಿ) | 200 ಮೀಟರ್ ಓಟ | --- | 40 ಸೆಕೆಂಡುಗಳು |

ಈ ಮೇಲಿನ 5 ವಿವಿಧ ದೈಹಿಕ ಕಾರ್ಯ ಸಮರ್ಥತೆ ಪರೀಕ್ಷೆಗಳ ಪೈಕಿ ಕನಿಷ್ಠ 3 ಪರೀಕ್ಷೆಗಳಲ್ಲಿ ಅಭ್ಯರ್ಥಿಗಳು ಕಡ್ಡಾಯವಾಗಿ ತೇರ್ಗಡೆ ಹೊಂದಬೇಕು. ದೈಹಿಕ ಕಾರ್ಯ ಸಮರ್ಥತೆ ಪರೀಕ್ಷೆಯಲ್ಲಿ ಅನರ್ಹರಾದ ಅಭ್ಯರ್ಥಿಗಳನ್ನು ಮುಂದಿನ ಆಯ್ಕೆ ಪ್ರಕ್ರಿಯೆಯಿಂದ ಕೈಬಿಡಲಾಗುವುದು. ಅರ್ಹರಾದ ಅಭ್ಯರ್ಥಿಗಳನ್ನು ಲಿಖಿತ ಪರೀಕ್ಷೆಗೆ ಹಾಜರಾಗಲು ಅವಕಾಶ ನೀಡಲಾಗುವುದು.

ಪರೀಕ್ಷಾ ವೇಳಾಪಟ್ಟಿ ಈ ಕೆಳಕಂಡಂತಿದೆ:-

ದಿನಾಂಕ 20-01-2016 ರಿಂದ 23-01-2016 ರವರೆಗೆ 2ನೇ ಹಂತದ ದೈಹಿಕ ಕಾರ್ಯ ಸಮರ್ಥತೆ ಪರೀಕ್ಷೆಗಳು ನಡೆಯುತ್ತದೆ. ದಿನಾಂಕ 24-1-2016 ರಂದು ಲಿಖಿತ ಪರೀಕ್ಷೆ ನಡೆಯುತ್ತದೆ. ಎಲ್ಲಾ ಅರ್ಹ ಅಭ್ಯರ್ಥಿಗಳಿಗೆ ಹಾಜರಾಗಬೇಕಾದ ಸ್ಥಳ, ಸಮಯ ಇತ್ಯಾದಿ ಕುರಿತು ಪ್ರವೇಶ ಪತ್ರವು ದಿನಾಂಕ 11-01-2016 ರಿಂದ ಇಲಾಖಾ ವೆಬ್‌ಸೈಟ್‌ನಲ್ಲಿ ದೊರೆಯುತ್ತದೆ.

ಅಭ್ಯರ್ಥಿಗಳು ಎಲ್ಲಾ ದೈಹಿಕ ಕಾರ್ಯ ಸಮರ್ಥತೆ ಪರೀಕ್ಷೆಗಳಿಗೆ ಪೂರ್ವ ತಯಾರಿ ಮಾಡಿಕೊಂಡು ಹಾಜರಾಗತಕ್ಕದ್ದು. ಈ ಬಗ್ಗೆ ಖುದ್ದು ಎಚ್ಚರಿಕೆ ವಹಿಸತಕ್ಕದ್ದು. ದೈಹಿಕ ಕಾರ್ಯ ಸಮರ್ಥತೆ ಪರೀಕ್ಷೆಗಳಲ್ಲಿ ಯಾವುದೇ ಅವಘಡ ಸಂಭವಿಸಿದಲ್ಲಿ ಇಲಾಖೆಯು ಜವಾಬ್ದಾರಾಗಿರುವುದಿಲ್ಲ.

ಈ ಕುರಿತು ಹೆಚ್ಚಿನ ಮಾಹಿತಿಗಾಗಿ ಇಲಾಖಾ website: www.aranya.gov.in ನ್ನು ನೋಡಬಹುದು.

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ,
(ಮುಖ್ಯಸ್ಥರು, ಅರಣ್ಯ ಪಡೆ)

ಬೆಂಗಳೂರು,
ದಿನಾಂಕ: 09-12-2015